**<u>ದಿನಾಂಕಃ 21.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಲ್ ಎ ವಕೀಲರಿಂದಃ</u>**

1) ಪ್ರತಿವಾದಿಯು ದಾವಾ ಸ್ವತ್ತಿನ ಯಾವ ಬದಿಯಲ್ಲಿ ರಸ್ತೆ ಮಾಡಲು ಪ್ರಯತ್ನಪಟ್ಟಿರುತ್ತಾರೆ ಎಂದು ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ತೆಂಗು, ಶ್ರೀಗಂಢ, ಮಹಾಗನಿ ಮತ್ತು ಇತರೆ ಗಿಡಗಳನ್ನು ಬೆಳೆಸಿರುತ್ತೇನೆ. ಆ ರೀತಿ ಮರಗಳು ಇರುವ ಕಡೆ ರಸ್ತೆ ಮಾಡಲು ಸಾಧ್ಯವಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಪ್ರತಿವಾದಿಯು ರಸ್ತೆ ಮಾಡಲು ಪ್ರಯತ್ನ ಮಾಡಿದ್ದಾಗಿ ನುಡಿಯುತ್ತಾರೆ. ಪ್ರತಿವಾದಿಗಳು ರಸ್ತೆ ಮಾಡುವ ಉದ್ದೇಶದಿಂದ ಮರಗಳನ್ನು ಕಡಿಯಲು ಮುಂದಾಗಿದ್ದರು. ದಿ 09.08.2022ರಂದು ಪ್ರತಿವಾದಿಗಳು ದಾವಾ ಸ್ವತ್ತಿಗೆ ಬಂದು ರಸ್ತೆ ಮಾಡಲು ಪ್ರಯತ್ನ ಪಟ್ಟಿದ್ದಾಗಿ ತೋರಿಸಲು ಭಾವಚಿತ್ರಗಳನ್ನು ತೆಗೆದಿರುವುದಿಲ್ಲ. ಪ್ರತಿವಾದಿಗಳು ನಾನು ಹೇಳಿದಂತೆ ದಾವಾ ಸ್ವತ್ತಿನಲ್ಲಿ ರಸ್ತೆ ಮಾಡಲು ಯಾವುದೇ ರೀತಿ ಪ್ರಯತ್ನಪಟ್ಟಿಲ್ಲ ಎಂದರೆ ಸರಿಯಲ್ಲ.

2) ದಾವಾ ಸ್ವತ್ತಿನ ಚೆಕ್ಕುಬಂದಿ ಮತ್ತು ನನ್ನ ಕ್ರಯ ಪತ್ರದಲ್ಲಿನ ಚೆಕ್ಕುಬಂದಿಗೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿ ಸ್ವತ್ತಿನ ಉತ್ತರಕ್ಕೆ ಈರಣ್ಣ ಮತ್ತು ಪುಟ್ಟತಾಯಮ್ಮರವರ ಜಮೀನು ತೋರಿಸಲಾಗಿದೆ ಎಂದರೆ ಸರಿ. ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ಇತರೆ ಜನರ ಕೃಷಿ ಜಮೀನು ಇದೆ ಎಂದರೆ ಸರಿ. ಆದ ಕಾರಣ ಪ್ರತಿವಾದಿಗಳು ನನ್ನ ಸ್ವತ್ತಿನಲ್ಲಿ ಮಾತ್ರ ರಸ್ತೆ ಮಾಡುವ ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಸ್ವತ್ತಿನಲ್ಲಿ ಹಾದು ಹೋಗುವ ಅನಿವಾರ್ಯತೆ ಇಲ್ಲ ಎಂದರೆ ಸರಿ. ಆದ ಕಾರಣ ಪ್ರತಿವಾದಿಗಳು ನನ್ನ ಜಮೀನಿನಲ್ಲಿ ರಸ್ತೆ ಮಾಡುವ ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ದ ನಾನು ಬೇರೆ ಒಂದು ದಾವೆಯನ್ನು ಸಲ್ಲಿಸಿದ್ದು ಅದನ್ನು ಹಿಂತೆಗೆದುಕೊಳ್ಳಿ ಇಲ್ಲವಾದಲ್ಲಿ ರಸ್ತೆ ಮಾಡುತ್ತೇವೆ ಎಂದು ಪ್ರತಿವಾದಿಗಳು ಮುಂದಾಗಿದ್ದರು. ನನ್ನ ಜಮೀನಿನಲ್ಲಿ ರಸ್ತೆ ಮಾಡಬೇಕಾದರೆ ನನ್ನ ಜಮೀನಿನ ಅಕ್ಕ ಪಕ್ಕದ ಜಮೀನುಗಳಲ್ಲಿ ಸಹ ಪ್ರತಿವಾದಿಗಳು ರಸ್ತೆ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ.

3) ಅಸಲು ದಾವಾ ಸಂಖ್ಯೆ.85/2019ರಂತೆ ಪ್ರತಿವಾದಿಗಳ ವಿರುದ್ದ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಪ್ರತಿವಾದಿಗಳು ಮನೆ ಕಟ್ಟಿದ್ದ ಕಾರಣ ಅವರಿಗೆ ತೊಂದರೆ ಕೊಡಲು ಆ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ದ ಇದ್ದ ದ್ವೇಷದ ಕಾರಣ ಅವರಿಗೆ ತೊಂದರೆ ಕೊಡಲು ಈ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ದ ಈ ದಾವೆ ಹೂಡಲು ಯಾವುದೇ ಕಾರಣ ಇಲ್ಲ ಎಂದರೆ ಸರಿಯಲ್ಲ. ಈ ಹಿಂದೆ ನನ್ನ ಜಮೀನನ್ನು ಒತ್ತುವರಿ ಮಾಡಿ ಪ್ರತಿವಾದಿಗಳು ಮನೆ ಕಟ್ಟಿದ್ದು, ಈಗ ಈ ಜಮೀನಿನಲ್ಲಿಯೂ ಅವರು ಒತ್ತುವರಿ ಮಾಡಿ ರಸ್ತೆ ಮಾಡಲು ಮುಂದಾಗಿರುವ ಕಾರಣ ಈ ದಾವೆಯನ್ನು ಹೂಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿದ ಸಂಗತಿಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).**

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**